ಮೈಸೂರು ರಾಜ್ಯಪಾಲರು ರಾಜ್ಯದ ವಿಧಾನ ಮಂಡಲದಲ್ಲಿ ನೀಡಿದ ಭಾಷಣ

ವಿಧಾನಮಂಡಲದ ಸದಸ್ಯ ಮಹಾಶಯರೆ,

ಈ ಸಂದರ್ಭದಲ್ಲಿ ನಿಮಗೆಲ್ಲ ಹಾರ್ದಿಕ ಸ್ವಾಗತ ಬಯಸುವ ಸುಯೋಗ ನನಗೆ ಲಭಿಸಿದೆ. ಪ್ರಜಾಪ್ರಭುತ್ವದ ಅಡಳಿತ ಪುನಃ ಸ್ಥಾಪಿತವಾಗಿ ಈಗ ಹನ್ನೊಂದು ತಿಂಗಳುಗಳ ಕಳೆದಿವೆ. 1971—1972ರಲ್ಲಿ ನಡೆದ ಚುನಾವಣಾ ಕಾಲದಲ್ಲಿ ಜನತೆಯ ಮುಂದಿಟ್ಟ ಸಾಮಾಜಿಕ ಆರ್ಥಿಕ, ಗುರಿಗಳನ್ನು ಸಾಧಿಸುವುದೇ ಈ ಅವಧಿಯಲ್ಲಿ ನಮ್ಮ ಸರ್ಕಾರದ ಪ್ರಧಾನ ಕರ್ತವ್ಯವಾಗಿತ್ತು. ಜನತೆಯ ದುರ್ಬಲ ಪಂಗಡಗಳ ಉದ್ಧಾರಕ್ಕೆ ನೆರವಾಗಬಲ್ಲ ಮತ್ತು ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ನಿಜವಾದ ಅವಕಾಶ ಸಮತೆಯನ್ನು ಒದಗಿಸಬಲ್ಲ ಕಾರ್ಯನೀತಿಗಳನ್ನೂ ಕಾರ್ಯಕ್ರಮಗಳನ್ನೂ ನಮ್ಮ ಸರ್ಕಾರದವರು ಮುಂದುವರಿಸಿಕೊಂಡು ಹೋಗುವರು.

ಮಳೆ ಬೆಳೆ, ನೈಸರ್ಗಿಕ ವಿಪತ್ತುಗಳು ಮತ್ತು ಪರಿಹಾರ ಕಾರ್ಯಕ್ರಮಗಳು :

ರಾಜ್ಯದ ಬಹುಭಾಗದಲ್ಲಿ ಹಿಂದೆಂದೂ ಸಂಭವಿಸದ ಬರಗಾಲ ಹಾಗೂ ಅಭಾವಪರಿಸ್ಥಿತಿ ತಲೆದೋರಿ, ಅದರಿಂದ ನಮ್ಮ ಸರ್ಕಾರವು ಮಹತ್ತರ ಸವಾಲನ್ನು ಇದಿರಿಸಬೇಕಾಗಿ ಬಂತು. ಈ ದುಃಸ್ಥಿತಿಯ ನಿವಾರಣೆಗೆ ಕೂಡಲೆ ಪರಿಹಾರ ಒದಗಿಸುವುದಲ್ಲದೆ, ಇಂಥ ಪರಿಸ್ಥಿತಿಗಳು ಪದೇ ಪದೇ ಸಂಭವಿಸದಂತೆ ತಡೆಗಟ್ಟುವ ಖಾಯಂ ವ್ಯವಸ್ಥೆಗಳನ್ನು ಕೈಕೊಳ್ಳುವುದಕ್ಕಾಗಿಯೂ ಸರ್ವ ಪ್ರಯತ್ನ ನಡೆಯುತ್ತಿದೆ.

ಜುಲೈ ಎರಡನೆಯ ವಾರದಿಂದ ಆಗಸ್ಟ್ 1972ರ ಕೊನೆಯವರೆಗೆ ಅವಿಚ್ಛಿನ್ನ ಬರಗಾಲದ ಪರಿಣಾಮವಾಗಿ ಉತ್ತರ ಭಾಗದ ಜಿಲ್ಲೆಗಳಲ್ಲಿ ಖಾರೀಫ್ ಭೂಮಿಯ ಬಹು ಭಾಗದಲ್ಲಿ ಬಿತ್ತನೆಯಾಗಲಿಲ್ಲ. ಆಮೇಲೆ ಅಲ್ಲಲ್ಲಿ ಕೊಂಚ ಮಳೆಯೇನೋ ಬಿತ್ತು. ಆದರೆ ಇದರಿಂದ ರಾಜ್ಯದ ಎಲ್ಲಾ ಭಾಗಗಳಿಗೆ ಅನುಕೂಲವಾಗಲಿಲ್ಲ. ಬೀದರ, ಗುಲ್ಬರ್ಗ, ಬಿಜಾಪುರ, ಬೆಳಗಾಂವಿ ಮತ್ತು ರಾಯಚೂರು ಜಿಲ್ಲೆಗಳ 38 ತಾಲೂಕುಗಳಲ್ಲಿ ಖಾರೀಫ್ ರಾಬಿ ಇವೆರಡೂ ಬೆಳೆ ಬಂದಿರಲಿಲ್ಲವಾಗಿ, ಈ ತಾಲೂಕುಗಳ ಪರಿಸ್ಥಿತಿ ತೀರ ದಾರವಾಣಿಗಿದೆ.

ಉತ್ತರ ಭಾಗದ ಜಿಲ್ಲೆಗಳಲ್ಲಿಂತೂ ಇಂಥ ಭೀಕರ ಸ್ಥಿತಿ ಹಿಂದೆ ಎಂದೂ ಬಂದಿರಲಿಲ್ಲ. ಈ ವಿಷಮ ಸಂಕಟವನ್ನು ಅನುಭವಿಸುವ ಜನತೆಗೆ ನಮ್ಮ ಹೃತ್ಪೂರ್ವಕ ಸಹಾನುಭೂತಿ ಸಲ್ಲಬೇಕು. ಈ ವಿಚಾರದಲ್ಲಿ ನಮ್ಮ ಸರ್ಕಾರದವರು ತಮ್ಮ ಹೊಣೆಗಾರಿಕೆಯನ್ನು ಪೂರ್ತಿಯಾಗಿ ತಿಳಿದವರಾಗಿದ್ದಾರೆ. ರಾಜ್ಯದ ಎಲ್ಲ ಜನವರ್ಗಗಳೂ ಕ್ಷಾಮ ಪರಿಹಾರ ಕಾರ್ಯದಲ್ಲಿ ಪಾಲ್ಗೊಳ್ಳುವಂತಾಗಲು ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ರಾಜ್ಯ ಅಭಾವ ಪರಿಹಾರ ಸಮಿತಿ ರಚಿತವಾಗಿದೆ. ಸಂತ್ರಸ್ತ ಜನತೆಯ ಕಷ್ಟ ನಿವಾರಣೆಗಾಗಿ ನಡೆಯುವ ಯತ್ನದಲ್ಲಿ ಸಮಸ್ತ ಜನತೆಯ ಶಕ್ತಿ ಸಾಮರ್ಥ್ಯಗಳನ್ನು ಬಳಸಿಕೊಳ್ಳಲು ಸಮಿತಿಗೆ ಸಾಧ್ಯವಾಗುವುದೆಂದು ನಂಬಿದ್ದೇನೆ. ಬೇರೆ ಬೇರೆ ಸಂಘ ಸಂಸ್ಥೆಗಳಿಂದಲೂ ಮಹಾಶಯರುಗಳಿಂದಲೂ ಸದಾ ಬರುವ ಅಮೂಲ್ಯ ಸಹಾಯ ಸಹಕಾರಗಳನ್ನು ನಾನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

ಈ ಸಂಕಟ ನಿವಾರಣೆಗಾಗಿ ಒಟ್ಟು 16.50 ಕೋಟಿ ರೂಪಾಯಿ ವೆಚ್ಚ ತಗಲುವ ಪರಿಹಾರ ಕಾರ್ಯಕ್ರಮವೊಂದನ್ನು ಸಿದ್ಧಪಡಿಸಿ, ಈ ಸಮಗ್ರ ವೆಚ್ಚವನ್ನೆಲ್ಲ ವಹಿಸಿಕೊಳ್ಳುವ ಬಗ್ಗೆ ಕೇಂದ್ರದ ನೆರವು ಕೋರಿ, ಈ ಪೈಕಿ ಅರ್ಧಾಂಶದಷ್ಟನ್ನಾದರೂ ಒಡನೆಯೇ ನೀಡುವಂತೆ ಭಾರತ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳಲಾಗಿತ್ತು. ಅಲ್ಲದೆ, ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಿಕೊಡಲು, ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡಲು ಮಲಪ್ರಭಾ ಮತ್ತು ಕೃಷ್ಣಾ ಮೇಲ್ದಂಡೆ ಅಣೆಕಟ್ಟುಗಳಿಗೆ ಕಾಲುವೆಗಳ ನಿರ್ಮಾಣ ಕೈಕೊಳ್ಳುವುದಕ್ಕಾಗಿಯೂ ಮತ್ತು ಪತದ ನೀರಾವರಿ ಸೌಲಭ್ಯಕ್ಕಾಗಿ ಹಾಗೂ ಬೇಸಿಗೆ ತಿಂಗಳುಗಳಲ್ಲಿ ಕುಡಿಯುವ ನೀರಿನ ಪೂರೈಕೆಗಾಗಿ ನೀರು ತುಂಬಿಟ್ಟುಕೊಳ್ಳಲು ನಾಲ್ಕು ಸ್ಥಳಗಳಲ್ಲಿ ಕೃಷ್ಣಾ ನದಿಗೆ ಮಧ್ಯಮ ಗಾತ್ರದ ಅಣೆಕಟ್ಟುಗಳ ನಿರ್ಮಾಣಕ್ಕಾಗಿಯೂ 9 ಕೋಟಿ ರೂಪಾಯಿ ನೀಡಬೇಕೆಂಬ ವಿನಂತಿಯನ್ನೂ ಸಲ್ಲಿಸಲಾಗಿತ್ತು.

ಸೆಪ್ಟೆಂಬರ್ 1972ಅಲ್ಲಿ ಸಂಕಟಗ್ರಸ್ತ ಪ್ರದೇಶಗಳಲ್ಲಿ ಸಂಚರಿಸಿ ಅಧ್ಯಯನ ತಂಡವು ಸಲ್ಲಿಸಿದ ಶಿಫಾರಸಿನ ಮೇರೆಗೆ, 1972ನೆಯ ಇಸವಿ ಡಿಸೆಂಬರ್ ತಿಂಗಳ ಕೊನೆಯವರೆಗೆ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ನಿವಾರಣೆಗಾಗಿ ವಹಿಸತಕ್ಕ ಹೆಚ್ಚಕ್ಕೆ 7.75 ಕೋಟಿ ರೂಪಾಯಿಯಷ್ಟು ಪರಮಾವಧಿ ಮೊತ್ತವನ್ನು ಕೇಂದ್ರ ಸರ್ಕಾರದವರು ಗೊತ್ತುಪಡಿಸಿದ್ದರು. ಈ ಸಂಬಂಧದಲ್ಲಿ ಡಿಸೆಂಬರ್ ತಿಂಗಳ ಕೊನೆಯವರೆಗೆ ವಹಿಸಿದ ಹೆಚ್ಚ 13.37 ಕೋಟಿ ರೂಪಾಯಿ.

ಈ ಪ್ರದೇಶಗಳಲ್ಲಿ ಪರಿಹಾರ ಒದಗಿಸುವುದಕ್ಕಾಗಿ 1973ನೆಯ ಇಸವಿ ಸೆಪ್ಟೆಂಬರ್ ತಿಂಗಳ ಕೊನೆಯವರೆಗೆ ಒಟ್ಟು 150.5ಸ ಕೋಟಿ ರೂಪಾಯಿ ಹೆಚ್ಚದ ಕಾರ್ಯಕ್ರಮವೊಂದನ್ನು ಸರ್ಕಾರದವರು ಸಿದ್ಧಪಡಿಸಿದ್ದಾರೆ. ಉದ್ಯೋಗಾವಕಾಶ, ನೀರಾವರಿ ಜಾವಿಗಳನ್ನು ತೋಡುವುದು ಮತ್ತು ಜಾವಿಗಳ ಆಳ ಹೆಚ್ಚಿಸುವುದು, ತಕ್ಕಾವಿ ಸಾಲಗಳ ನೀಡಿಕೆ, ಪಂಪುಗಳ ಪೂರೈಕೆ, ಸಂಕಟಗ್ರಸ್ತ ಪ್ರದೇಶಗಳಿಗೆ ನೀರು ಸರಬರಾಜು, ಮೇವಿನ ಸರಬರಾಜು, ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಸೇವೆ, ಉಚಿತ ಆಹಾರ ನೀಡಿಕೆ, ನೇಕಾರರಿಗೆ ಹಾಗೂ ಕರಕುಶಲ ಶಿಲ್ಪಿಗಳಿಗೆ ನೆರವು, ವಿದ್ಯಾರ್ಥಿಗಳಿಗೆ ಶಿಕ್ಷಣ ರಿಯಾಯಿತಿ ಮೊದಲಾದ ಏರ್ಪಾಡುಗಳು ಈ ಕಾರ್ಯಕ್ರಮದಲ್ಲಿ ಅಡಕವಾಗಿವೆ.

1973ನೆಯ ಇಸವಿ ಜನವರಿ 22 ಮತ್ತು ಜನವರಿ 25ನೆಯ ದಿನಾಂಕಗಳ ಮಧ್ಯೆ ಇನ್ನೊಂದು ಕೇಂದ್ರ ತಂಡವು ರಾಜ್ಯವನ್ನು ಸಂದರ್ಶಿಸಿತ್ತು. ಈ ತಂಡದ ಶಿಫಾರಸಿನ ಮೇಲೆ ಕೇಂದ್ರದ ಸಹಾಯ ದೊರೆಯುವ ನಿರೀಕ್ಷೆಯಿದೆ.

ಪರಿಸ್ಥಿತಿ ಕಠಿಣವಾಗಿರುವುದೇನೋ ನಿಜ. ಆದರೂ ಕೂಡ, ಭಾರತ ಸರ್ಕಾರದವರು ಉದಾರವಾಗಿ ನೀಡಿದ ಆರ್ಥಿಕ ಸಹಾಯದಿಂದಲೂ ನಮ್ಮ ರಾಜ್ಯದ ಜನತೆಯ ಸಹಕಾರದಿಂದಲೂ ನಮ್ಮ ಸರ್ಕಾರದವರು ಈ ಪರಿಸ್ಥಿತಿಯನ್ನು ಯಶಸ್ವಿಯಾಗಿ ಪರಿಹರಿಸಬಲ್ಲರೆಂಬ ಭರವಸೆ ನನಗಿದೆ.

ರಾಜ್ಯದ ಕೆಲವು ಭಾಗಗಳಲ್ಲಿ ಚಂಡಮಾರುತಗಳೂ ನೆರೆಹಾವಳಿಗಳೂ ಅಪಾರ ಹಾನಿಯುಂಟುಮಾಡಿವೆ. ಡಿಸೆಂಬರ್ 1972ರಲ್ಲಿ ಮೈಸೂರು ಜಿಲ್ಲೆಯಲ್ಲಿ ಚಿಕ್ಕಹೊಳೆ ಅಣೆಕಟ್ಟು ಒಡೆದು, ಇದರಿಂದ ಹಲವಾರು ಕೆರೆಕಟ್ಟೆಗಳು ಒಡೆದುಹೋದುವಲ್ಲದೆ, ಜನರೂ ದನಕರುಗಳೂ ಪ್ರಾಣ ಕಳೆದುಕೊಳ್ಳಬೇಕಾಯಿತು. ಮನೆಗಳಿಗೆ, ಗುಡಿಸಿಲುಗಳಿಗೆ ಹಾನಿ ತಟ್ಟಿತು. ಈ ಸಂಪ್ರದೀಪಿತರಿಗೆ ಒಡನೆಯೇ ಪರಿಹಾರ ನೀಡಲಾಯಿತು. ಅಗತ್ಯವಿರುವ ಸಹಾಯವನ್ನೆಲ್ಲ ಒದಗಿಸುವುದಕ್ಕಾಗಿ ಸರ್ವ ಪ್ರಯತ್ನ ನಡೆಯುತ್ತಿದೆ.

ಅಧಿಕೃತ ಭಾಷೆಯಾಗಿ ಕನ್ನಡ.

ಸರ್ಕಾರದವರು ವಿಶೇಷ ಸಮಿತಿಯ ಶಿಫಾರಸನ್ನು ಈಚೆಗೆ ಪರಿಶೀಲಿಸಿ, ಕನ್ನಡವನ್ನು ಆಗಸ್ಟ್ 15, 1972ನೇ ದಿನಾಂಕದಿಂದ ಉಪವಿಭಾಗ ಮಟ್ಟದಿಂದ ರೆವಿನ್ಯೂ ಜಿಲ್ಲೆಯವರೆಗೆ ಅಧಿಕಾರ ವ್ಯಾಪ್ತಿಯಿರುವ ಎಲ್ಲ ಕಛೇರಿಗಳಲ್ಲಿ ಆಡಳಿತ ಭಾಷೆಯನ್ನಾಗಿ ಮಾಡುವ ನಿರ್ಧಾರಕ್ಕೆ ಕೊಂಡಿದ್ದಾರೆ. ಈ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲು ಅವಶ್ಯವಾಗುವ ಏರ್ಪಾಡುಗಳನ್ನು ಕೂಡ ಸರ್ಕಾರದವರು ಕೈಗೊಂಡಿದ್ದಾರೆ.

ಮೈಸೂರಿಗೆ "ಕರ್ನಾಟಕ" ಎಂದು ಪುನರ್ನಾಮಕರಣ.

ಈ ಅಧಿವೇಶನದಲ್ಲಿ ನಿಮ್ಮ ಕಾರ್ಯಕಲಾಪಗಳು ಮುಕ್ತಾಯವಾಗುವುದಕ್ಕೆ ಮುನ್ನ, ಮೈಸೂರಿಗೆ "ಕರ್ನಾಟಕ" ಎಂದು ಪುನರ್ನಾಮಕರಣ ಮಾಡಲು ಅವಕಾಶ ಕಲ್ಪಿಸುವ 1972ನೆಯ ಇಸವಿಯ ಮೈಸೂರು ರಾಜ್ಯದ (ನಾಮಪರಿವರ್ತನ) ವಿಧೇಯಕವು ಸಂಸತ್ತಿನಲ್ಲಿ ತೀರ್ಣವಾಗುವುದೆಂದು ನಿರೀಕ್ಷಿಸುತ್ತೇನೆ.

ಶಾಸನ ಸುವ್ಯವಸ್ಥೆ.

ಅಕ್ಟೋಬರ್ 1972ರಲ್ಲಿ ಬೆಂಗಳೂರಿನಲ್ಲಿ ದುರದೃಷ್ಟವಶಾತ್ ಸಂಭವಿಸಿದ ಶಾಂತಿ ಭಂಗವನ್ನು ಬಿಟ್ಟರೆ, ರಾಜ್ಯದಲ್ಲಿ ಶಾಸನ ಸುವ್ಯವಸ್ಥೆ ಒಟ್ಟಿನ ಮೇಲೆ ಸಮಾಧಾನಕರವಾಗಿತ್ತು.

ಈ ಶಾಂತಿಭಂಗ ಪ್ರಕರಣವನ್ನು ಪೋಲೀಸರು ಸಮರ್ಥವಾಗಿ ಎದುರಿಸಿ ತ್ವರಿತವಾಗಿ ಹತೋಟಿಗೆ ತಂದರು. ಕಳೆದ ವರ್ಷ ಗುಲ್ಬರ್ಗದಲ್ಲಿ ಸಂಭವಿಸಿದ ಗಲಭೆಗಳ ಕುರಿತು ವಿಚಾರಣೆ ನಡೆಯುವಂತೆ ಆದೇಶ ನೀಡಿರುವ ಸಂಗತಿ ಮಾನ್ಯ ಸದಸ್ಯರಿಗೆ ಈಗಾಗಲೇ ವಿದಿತವಾಗಿದೆಯಷ್ಟೆ. ವರದಿ ಬರುತ್ತಲೂ ಸರ್ಕಾರವವರು ಸೂಕ್ತ ಕ್ರಮ ಕೈಕೊಳ್ಳುತ್ತಾರೆ.

ಯೋಜನೆ.

1972—73ನೇ ವರ್ಷದ ವಾರ್ಷಿಕ ಯೋಜನೆಗೆ 76.28 ಕೋಟಿ ರೂಪಾಯಿ ವೆಚ್ಚ ತಗಲುವುದಾಗಿದೆ. ಈ ಯೋಜನೆಯಲ್ಲಿ ವ್ಯವಸಾಯೋತ್ಪಾದನೆ, ಉದ್ಯಮ ಪ್ರಾಂಗಣ (ಇಂಡಸ್ಟ್ರಿಯರ್ ಎಸ್ಟೇಟ್,) ಗಳ ಅಭಿವೃದ್ಧಿ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ—ಈ ಕಾರ್ಯಕ್ರಮಗಳಿಗೆ ಮಹತ್ವ ನೀಡಲಾಗಿದೆ. ಪ್ರಸಕ್ತ ವರ್ಷದಲ್ಲಿ ಮಹತ್ವದ ಎರಡು ವಿಶಿಷ್ಟ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ. ಒಂದನೆಯದು, ವಿದ್ಯಾವಂತ ನಿರುದ್ಯೋಗಿಗಳಿಗೆ ಹಾಗೂ ಗ್ರಾಮೀಣ ನಿರುದ್ಯೋಗಿಗಳಿಗೆ ಸ್ವಂತ ಉದ್ಯೋಗ ಹಾಗೂ ನವೀಕರಣ ಉದ್ಯೋಗ ಒದಗಿಸುವ ವಿಶಿಷ್ಟ ಉದ್ಯೋಗಾವಕಾಶ ಕಾರ್ಯಕ್ರಮ. ಭೂರಹಿತ ಗ್ರಾಮೀಣ ಜನತೆಗೆ ಮನೆ ನಿವೇಶನಗಳನ್ನು ಒದಗಿಸುವುದು ಎರಡನೆಯ ಮಹತ್ವದ ಕಾರ್ಯಕ್ರಮ. ಈ ಕಾರ್ಯಕ್ರಮದ ಮೇರೆಗೆ ಎರಡು ಲಕ್ಷಕ್ಕಿಂತಲೂ ಹೆಚ್ಚು ಮನೆ ನಿವೇಶನಗಳನ್ನು ಈಗಾಗಲೇ ಹಂಚಲಾಗಿದೆ. ಇದರ ಜೊತೆಗೆ, ಗ್ರಾಮಾಂತರ ನೀರು ಸರಬರಾಜಿನ ತ್ವರಿತ ಕಾರ್ಯಕ್ರಮವನ್ನೂ ರಾಜ್ಯದ ಬೃಹತ್ ನಗರಗಳಲ್ಲಿ ಕೊಳಚೆ ಪ್ರದೇಶಗಳ ಆವರಣ ಶುದ್ಧೀಕರಣ ಯೋಜನೆಯನ್ನೂ ಕೈಕೊಳ್ಳಲಾಗಿದೆ.

1973-74ನೇ ವರ್ಷದ ರಾಜ್ಯದ ವಾರ್ಷಿಕ ಯೋಜನೆಯ ಬಗ್ಗೆ 84.83 ಕೋಟಿ ರೂಪಾಯಿ ವೆಚ್ಚವಾಗುವುದು. ಇದರಲ್ಲಿ ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಕಾರ್ಯಯೋಜನೆಗಳು ಸೇರಿಲ್ಲ. ಕೃಷಿ ಕಾರ್ಯಕ್ರಮ, ಸಹಕಾರ, ಭಾರಿ ನೀರಾವರಿ, ಗ್ರಾಮಾಂತರ ವಿದ್ಯುತ್ ವ್ಯವಸ್ಥೆ, ನೀರು ಸರಬರಾಜು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ—ಈ ಕಾರ್ಯವಲಯಗಳಿಗೆ ವೆಚ್ಚವಾಗತಕ್ಕ ಹಣ 1972-73ರಲ್ಲಿ ವಹಿಸಿದೆ ವೆಚ್ಚಕ್ಕಿಂತ ಗಮನಾರ್ಹವಾಗಿ ಅಧಿಕವಾಗಿದೆ.

1974ರಿಂದ ಪ್ರಾರಂಭವಾಗುವ ಐದನೆಯ ಪಾಂಚವಾರ್ಷಿಕ ಯೋಜನೆಯ ಬಗೆಗೆ ಸರ್ಕಾರದ ನಿಲುವನ್ನು ನಿರ್ಧರಿಸಲಾಗಿದೆ. ರಾಜ್ಯದಲ್ಲಿ ವ್ಯಾವಸಾಯಿಕ ಮತ್ತು ಔದ್ಯಮಿಕ ಉತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ನೀರಾವರಿ ಮತ್ತು ವಿದ್ಯುತ್ ಅಭಿವೃದ್ಧಿಯೇ ಮೂಲಾಧಾರ. ಇದಕ್ಕೆ ಅತ್ಯುಚ್ಚ ಪ್ರಾಶಸ್ತ್ಯ ನೀಡಲಾಗುವುದು. ಇದೇ ಕಾಲಕ್ಕೆ, ಮುಖ್ಯವಾಗಿ ಸಮಾಜದ ದುರ್ಬಲ ಪಂಗಡದವರಿಗೆ ಲಾಭದಾಯಕ ಉದ್ಯೋಗಾವಕಾಶವನ್ನು ತೀವ್ರವಾಗಿ ಒದಗಿಸುವ ಬಗ್ಗೆ ಮತ್ತು ಗ್ರಾಮೀಣ ಪ್ರಜಾಸಮುದಾಯದ ಬಹುಭಾಗಕ್ಕೆ ಸುಧಾರಿತ ರೀತಿಯಲ್ಲಿ ವಾಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಮೂಲಭೂತವಾದ ಕನಿಷ್ಠ ಅಗತ್ಯಗಳನ್ನು ಪೂರೈಸುವ ಬಗ್ಗೆ ರೂಪಿಸಿದ ಕಾರ್ಯಕ್ರಮಗಳಿಗೆ ವಿಶೇಷ ಪ್ರಾಧಾನ್ಯ ನೀಡಲಾಗುವುದು. ಪ್ರಾದೇಶಿಕ ಅಸಮತೆಗಳನ್ನು ತಗ್ಗಿಸುವ ವಿಚಾರಕ್ಕೂ ಕುಟುಂಬ ಯೋಜನೆ ಹಾಗೂ ಕುಟುಂಬ ಕಲ್ಯಾಣ ಯೋಜನೆಗಳ ತೀವ್ರ ಅನುಷ್ಠಾನಕ್ಕೂ ಗಮನ ಕೊಡಲಾಗುವುದು.

ಯೋಜನಾ ಕಾರ್ಯವಿಧಾನವು ಹೆಚ್ಚು ಹೆಚ್ಚಾಗಿ ಸೂಕ್ಷ್ಮತರವಾಗುತ್ತ ಬರುತ್ತಿದೆ, ಈ ಅಗತ್ಯಗಳನ್ನೆಲ್ಲ ಪೂರೈಸಿಕೊಳ್ಳುವುದಕ್ಕಾಗಿ ರಾಜ್ಯದ ಯೋಜನಾ ವ್ಯವಸ್ಥೆಯನ್ನು ಬಲಪಡಿಸಲಾಗುತ್ತಿದೆ. ಯೋಜನಾ ಮಂಡಲ ಪುನರ್‌ರಚಿತವಾಗಿದೆ.

ವ್ಯವಸಾಯ.

ಅನಾವೃಷ್ಟಿಯಿಂದ ಪ್ರಸಕ್ತ ವರ್ಷ ವ್ಯವಸಾಯೋತ್ಪಾದನೆಗೆ ತೀವ್ರ ಧಕ್ಕೆ ತಟ್ಟಿತು. ವ್ಯವಸಾಯೋತ್ಪಾದನೆಯಲ್ಲಿ ಸಂಭವಿಸಿದ ನಷ್ಟವನ್ನು ಆದಷ್ಟು ತುಂಬಿಕೊಳ್ಳುವುದಕ್ಕಾಗಿ ಭಾರತ ಸರ್ಕಾರದ ಸೂಚನೆಯಂತೆ ಎತ್ತರ ನೀರಾವರಿ, ಪಂಪು ಸೆಟ್ಟುಗಳಿಗೆ ವಿದ್ಯುತ್ತಿನ ಸರಬರಾಜು ಮತ್ತು ಸಾಲದ ಮೇರೆ ಬೀಜ, ಗೊಬ್ಬರ ಇತ್ಯಾದಿ ಕೃಷಿ ಪರಿಕರಗಳ ಸರಬರಾಜು— ಈ ವಿಶೇಷಾಂಶಗಳ ಮೂಲಕ ತ್ವರಿತ ವ್ಯವಸಾಯೋತ್ಪಾದನ ಕಾರ್ಯಕ್ರಮದೊಂದನ್ನು ಪ್ರಾರಂಭಿಸಲಾಯಿತು.

1973–74ರಲ್ಲಿ ಭಾರಿ ಪ್ರಮಾಣದ, ಮಧ್ಯಮ ಪ್ರಮಾಣದ ಮತ್ತು ಸಣ್ಣ ನೀರಾವರಿ ಕಾರ್ಯಕ್ರಮಗಳ ನಿರ್ವಹಣೆಯನ್ನು ತ್ವರಿತಗೊಳಿಸಲಾಗಿದೆ. ಇದರಿಂದ, ಸುಮಾರು 1,00,000 ಹೆಕ್ಟೇರು ಗಳಷ್ಟು ಹೆಚ್ಚು ಭೂಮಿಗೆ ನೀರಾವರಿಯಾಗುವ ಸಂಭವವಿದೆ, ಈ ವ್ಯವಸ್ಥೆಗಳ ಪರಿಣಾಮ ವಾಗಿ ಮುಂದಿನ ವರ್ಷದಿಂದ ಆಹಾರೋತ್ಪಾದನೆಯಲ್ಲಿ ಹೆಚ್ಚಳವುಂಟಾಗುವುದು.

ಇತ್ತೀಚೆಗೆ ಮಂಜೂರಾದ ವಿಶ್ವ ಬ್ಯಾಂಕ್ ಯೋಜನೆಯ ಮೇರೆಗೆ, ನೀರಾವರಿ, ಭೂಮಿ ಯನ್ನು ಕೃಷಿ ಯೋಗ್ಯಗೊಳಿಸುವ ಕೆಲಸ, ಟಾಕ್ಟರುಗಳ ನರಬರಾಜು ಮುಂದಾದ ವ್ಯವಸ್ಥೆ ಗಳಿಗಾಗಿ ಸುಮಾರು 40 ದಶ ಲಕ್ಷ ಡಾಲರುಗಳ ಸಾಲ ದೊರೆಯಲಿದೆ. ಈ ಯೋಜನೆಯ ಮೇರೆಗೆ, ಭೂಮಿಯನ್ನು ಕೃಷಿ ಯೋಗ್ಯಗೊಳಿಸುವ ಕೆಲಸಕ್ಕೆ ಸುಮಾರು 50 ಲಕ್ಷ ರೂಪಾಯಿ ಹಣವನ್ನೂ, ಸಣ್ಣ ನೀರಾವರಿಗೆ ಸುಮಾರು 200 ಲಕ್ಷ ರೂಪಾಯಿಯನ್ನೂ ಸಾಲ ನೀಡಲಾಗಿದೆ. ಹೊಸ ನೀರಾ ವರಿ ಬಾವಿಗಳ ತೋಡಿಕೆ ಮತ್ತು ಇವುಗಳಿಗೆ ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯಿಂದ ವಿದ್ಯುತ್ತು ನರಬರಾಜು—ಈ ಕಾರ್ಯಕ್ರಮವನ್ನು ಮುಂದಿನ ವರ್ಷ ಇನ್ನಷ್ಟು ತೀವ್ರವಾಗಿ ಮುಂದೊತ್ತ ರಾಗುವುದು. ಇದರ ಜೊತೆಗೆ, ಬೀಜ, ರಾಸಾಯನಿಕ ಗೊಬ್ಬರ, ಕೀಟನಾಶಕ ಮತ್ತು ಇನ್ನಿತರ ಪರಿಕರಗಳ ನರಬರಾಜಿನ ಬಗ್ಗೆ ವಿಸ್ತರಣ ಸೇವೆಯನ್ನು ಕೂಡ ಒದಗಿಸಲಾಗುವುದು.

ಕೃಷಿ ಕಾರ್ಯಗಳಿಗೆ ಬೇಕಾಗುವ ದೀರ್ಘಾವದಿ ಸಾಲವನ್ನು ಭೂ ಅಭಿವೃದ್ಧಿ ಬ್ಯಾಂಕಿ ನಿಂದ ಒದಗಿಸಲಾಗುವುದು. ಇದರ ಜೊತೆಗೆ, ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲವು ಸಹಕಾರಿ ಸಂಸ್ಥೆಗಳಮ್ಖಾರಾ ಮುಂದೆಯೂ ದೊರೆಯುವುದು.

ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳಿಗೆ ಗೊತ್ತುಪಡಿಸಿದ ಸಾಲ 43 ಕೋಟಿ ರೂಪಾಯಿ. ದೀರ್ಘಾವಧಿ ಸಾಲ 16 ಕೋಟಿ ರೂಪಾಯಿ. ಈ ಗುರಿಗಳನ್ನು ಪ್ರಸಕ್ತ ವರ್ಷ ಸಾಧಿಸುವ ನಿರೀಕ್ಷೆ ಇದೆ. ಇವಲ್ಲದೆ, ವಾಣಿಜ್ಯ ಬ್ಯಾಂಕುಗಳು ಮುಂದಿನ ವರ್ಷ ರೈತರಿಗೆ ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಸಾಲ ಒದಗಿಸಲಿವೆ.

ಪಶುಸಂಗೋಪನೆ.

ದೊಡ್ಡ ರೋಗ (ರಿಂಡರ್‌ಪೆಸ್ಟ್) ನಿರ್ಮೂಲನ ಯೋಜನೆಗೆ ಹೊಸ ರೂಪಕೊಟ್ಟಿದೆ ಮತ್ತು ದೊಡ್ಡ ರೋಗವನ್ನು ಪರಿಣಾಮಕಾರಿಯಾಗಿ ಹತೋಟಿಯಲ್ಲಿಡುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಅವಕ್ಕೆ ಅಗತ್ಯವಿರುವ ಸಿಬ್ಬಂದಿಯನ್ನೂ ಸಜ್ಜುನಲಕರಣೆಗಳನ್ನೂ ಯಂತ್ರ ಸಾಮಗ್ರಿಗಳನ್ನೂ ಒದಗಿಸಿದೆ.

ಬೆಂಗಳೂರಿನ ಕ್ಷೀರ ಕ್ಷೇತ್ರದಲ್ಲಿ ವಿಶ್ರತಳಿ ಜಾನುವಾರುಗಳ ಸುಧಾರಣೆಗಾಗಿ ಇತ್ತೀಚೆಗೆ ಒಂದು ಕೇಂದ್ರ ಪುರಸ್ಕೃತ ಯೋಜನೆ ಕೂಡ ಮಂಜೂರಾಗಿದೆ.

ಇತ್ತೀಚೆಗೆ ಮೈಸೂರು ನಗರದ ಸರ್ಕಾರಿ ಡೇರಿ ಸಂಸ್ಥೆಯಲ್ಲಿ ಕೆಲಸ ಪ್ರಾರಂಭವಾಗಿದೆ. ರಾಜ್ಯದ ಕ್ಷೀರ ಸಂಗ್ರಹಣ ಕಾರ್ಯಕ್ರಮಕ್ಕೆ ಈ ಡೇರಿಯಿಂದ ಗಮನಾರ್ಹ ಬೆಂಬಲ ದೊರೆಯುವ ನೀರಿಕ್ಷೆಯಿದೆ.

ಭಾರಿನೀರಾವರಿ.

ಘಟಪ್ರಭಾ, ಮಲಪ್ರಭಾ, ಕಬಿನಿ ಮತ್ತು ಹೇಮಾವತಿ ಯೋಜನೆಗಳ ಕೆಲಸದಲ್ಲಿ ಒಳ್ಳೆಯ ಪ್ರಗತಿಯಾಗಿದೆ. ಮಲಪ್ರಭಾ ಅಣೆಕಟ್ಟಿನ ಜಲಾಶಯದಲ್ಲಿ ಶಿಖರ ಮಟ್ಟದವರೆಗೆ ನೀರು ತುಂಬಿದಲು ಸಾಧ್ಯವಾಗಿದೆ. ಈ ನೀರಿನಿಂದ ಪ್ರಸ್ತುತ ವರ್ಷ ಸುಮಾರು 10,000 ಎಕರೆ ಭೂಮಿಗೆ ನೀರೊದಗಿಸಲು ಸಾಧ್ಯವಾಗುವುದು.

ಕೃಷ್ಣಾ ಮೇಲ್ದಂಡೆ, ಮಲಪ್ರಭಾ ಮತ್ತು ಕಾರಂಜ ನದಿಗಳಿಗೆ ಕಾಲುವೆ ನಿರ್ಮಾಣ ಕಾರ್ಯ ವನ್ನು ಕೈಗೆತ್ತಿಕೊಂಡಿದೆ. ಅಭಾವಪೀಡಿತ ಪ್ರದೇಶಗಳ ಜನರಿಗೆ ಈ ಕಾಲುವೆಗಳಿಂದ ಅನುಕೂಲ ವಾಗುವುದು.

ಪ್ರಾಪ್ತಿ ಕ್ರಮಾಂಕ Accession No. (B) 4895
ದಿನಾಂಕ Date.....

ಮಲಪ್ರಭಾ ಮತ್ತು, ಘಟಪ್ರಭಾ ಅಣೆಕಟ್ಟು ಯೋಜನೆಗಳಿಂದ ನೀರಾವರಿ ಸೌಲಭ್ಯವನ್ನು ಹೆಚ್ಚಿಸುವ ನಲುವಾಗಿ ಸರ್ಕಾರದವರು ಹಿರಿಯ ಅಧಿಕಾರಿಯೊಬ್ಬರನ್ನು ಪೂರ್ಣಕಾಲಿಕ ಆಡಳಿತ ಗಾರರನ್ನಾಗಿ ನೇಮಿಸಿದ್ದಾರೆ.

ಸಣ್ಣ ನೀರಾವರಿ.

2.20 ಕೋಟಿ ರೂಪಾಯಿ ವೆಚ್ಚದ ಕೆಂಪ್ರ ಸಹಾಯ ಕಾರ್ಯಕ್ರಮದ ಮೇರೆಗೆ ಈಗಾಗಲೇ ಕೈಕೊಂಡಿರುವ 51ಪತ್ತ ನೀರಾವರಿ ಯೋಜನೆಗಳ ಮುಕ್ತಾಯವನ್ನು ತ್ವರಿತಗೊಳಿಸುವುದರ ಜೊತೆಗೆ, ರಾಜ್ಯದಲ್ಲೆಲ್ಲ 70 ಪತದ ನೀರಾವರಿ ಯೋಜನೆಗಳನ್ನು ಹೊಸವಾಗಿ ಕೈಕೊಳ್ಳಲಾಗಿದೆ. ಖಾಯಂ ಪರಿಹಾರವನ್ನೂ ಉದ್ಯೋಗಾವಕಾಶವನ್ನೂ ಒದಗಿಸುವ ನಿಮಿತ್ತ, ಅಭಾವಪೀಡಿತ ಪ್ರದೇಶಗಳಲ್ಲಿ ಹೊಸವಾರು ಹೊಸ ಸಣ್ಣ ನೀರಾವರಿ ಕಾಮಗಾರಿಗಳಿಗೆ ಕೂಡ ಅನುಮೋದನೆ ನೀಡಲಾಗಿದೆ.

ವಿದ್ಯುಚ್ಛಕ್ತಿ.

ಜಲವಿದ್ಯುಚ್ಛಕ್ತಿ ವಿಚಾರದಲ್ಲಿ ಮೈಸೂರು ರಾಜ್ಯವು ಅನನ್ಯ ಸಾಮರ್ಥ್ಯ ಹೊಂದಿದೆಯೆಂಬ ನಂಗತಿಯನ್ನೂ ಇದನ್ನು ಆದಷ್ಟು ಬೇಗನೆ ಅಭಿವೃದ್ಧಿಗೊಳಿಸುವುದು ಅವಶ್ಯವೆಂಬುದನ್ನೂ ನಮ್ಮ ಸರ್ಕಾರದವರು ಪೂರ್ಣವಾಗಿ ಮನಗಂಡಿದ್ದಾರೆ ಇದರಿಂದ, ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸಲು ಮೈಸೂರು ರಾಜ್ಯಕ್ಕೆ ಅನುಕೂಲವಾಗುವುದಲ್ಲದೆ, ಕಷ್ಟಕಾಲದಲ್ಲಿ ನೆರೆರಾಜ್ಯಗಳಿಗೆ ಕೂಡ ಸಹಾಯ ನೀಡಲು ಸಾಧ್ಯವಾಗುವುದು.

ಮೈಸೂರು ರಾಜ್ಯದಲ್ಲಿ ಈಗಿನ ಒಟ್ಟು ಸ್ಥಾಪಿತ ಉತ್ಪಾದನ ಸಾಮರ್ಥ್ಯವು 966.6 ಎಂ. ಡಬ್ಲ್ಯು. ಶರಾವತಿ ಯೋಜನೆಯ ಇನ್ನೆರಡು ಘಟಕಗಳಲ್ಲಿ ಕೆಲಸ ಪ್ರಾರಂಭವಾದಾಗ, ಈ ಉತ್ಪಾದನ ಸಾಮರ್ಥ್ಯವು1974ರಲ್ಲಿ 1,144.9 ಎಂಡಬ್ಲ್ಯುಗೆ ಹೆಚ್ಚುವ ನಿರೀಕ್ಷೆಯಿದೆ. ಕಾಳೀ ನದಿ ಜಲವಿದ್ಯುತ್ ಯೋಜನೆಯ ಮೊದಲ ಹಂತದ ಕೆಲಸ ನಡೆಯುತ್ತಿದೆ. ಕಾಮಗಾರಿಗಳು ಮುಂದುವರಿಯುತ್ತಿವೆ. ಭಾರತ ಸರ್ಕಾರದವರು ಈ ಯೋಜನೆಯ ಮೊದಲ ಹಂತಕ್ಕೆ ನಾಲ್ಕನೆಯ ಯೋಜನಾವಧಿಯ ಉಳಿದ ಅವಧಿಯಲ್ಲಿ ಯೋಜನಾ ವೆಚ್ಚದ ಹೊರಗಡೆ ಧನಸಾಹಾಯ ನೀಡಲು ಒಪ್ಪಿಕೊಂಡು, ಪ್ರಸಕ್ತ ವರ್ಷಕ್ಕೆ 13.50 ಕೋಟಿ ರೂಪಾಯಿ ಹಣವನ್ನು ಮಂಜೂರು ಮಾಡಿದ್ದಾರೆ ರಾಜ್ಯಸರ್ಕಾರದವರು ಕಾಳೀ ನದಿ ಯೋಜನೆಯ ಮೊದಲ ಮತ್ತು ಎರಡನೆಯ ಹಂತದ ಕಾಮಗಾರಿಗಳನ್ನು ಲಿಂಗನಮಕ್ಕಿ ಅಣೆಕಟ್ಟಿನ ವಿದ್ಯುತ್ ಗೃಹದ ಕೆಲಸಕ್ಕೂ ವಾರಾಹಿ ಹಾಗೂ ಬೇಡತಿ ಯೋಜನೆಯ ಪೂರ್ವಭಾವಿ ಕಾಮಗಾರಿಗಳಿಗೂ ಆದ್ಯತೆ ಕೊಡಲು ನಿರ್ಧರಿಸಿದ್ದಾರೆ.

ಮಳೆ ಬಾರದೆ ಲಿಂಗನಮಕ್ಕಿ ಜಲಾಶಯದಲ್ಲಿ ನೀರಿನಮಟ್ಟ ಇಳಿದು ಹೋದಕಾರಣ, ರಾಜ್ಯದಲ್ಲಿ ವಿದ್ಯುತ್ತಿನ ಕಡಿತವನ್ನು ವಿಧಿಸಲಾಗಿದೆ. ಮುಂದಿನ ಮಳೆಗಾಲದವರೆಗೂ ಈ ಕಡಿತ ಮುಂದುವರಿಯುವ ಸಂಭವವಿದೆ. ಈ ತೊಂದರೆಯಿದ್ದರೂ ಕೂಡ, ಹಳ್ಳಿಗಳಿಗೆ ವಿದ್ಯುದ್ದೀಪ ಒದಗಿಸುವ ಕಾರ್ಯಕ್ರಮದಲ್ಲಿ ಗಮನಾರ್ಹ ಪ್ರಗತಿಯಾಗಿದೆ. ಮೈಸೂರು ರಾಜ್ಯವಿದ್ಯುಚ್ಛಕ್ತಿ ಮಂಡಲಿಯು ಸ್ವಾತಂತ್ರ್ಯ ಜಯಂತಿ ಸಮಾರಂಭಗಳ ಅಂಗವಾಗಿ, ಗ್ರಾಮಗಳಲ್ಲಿ 365 ಹರಿಜನ ವಸತಿಗಳಿಗೆ ವಿದ್ಯುದ್ದೀಪ ಒದಗಿಸುವ ಕಾರ್ಯಕ್ರಮವನ್ನು ಕೈಕೊಂಡಿದೆ. ಈ ಕೆಲಸ ಮುಂದುವರಿಯುತ್ತಿದೆ.

ಸಂಪರ್ಕಸಾಧನಗಳು

ನಮ್ಮ ಸರ್ಕಾರದವರು ಗ್ರಾಮಾಂತರ ಸಂಪರ್ಕ ಸಾಧನಗಳಿಗೆ ಆದ್ಯತೆ ಕೊಡಬಯಸಿ ಇತ್ತೀಚೆಗೆ ಸುಸಂಘಟಿತವಾದ ವ್ಯಾಪಕ ಗ್ರಾಮಾಂತರ ಸಂಪರ್ಕಸಾಧನ ಕಾರ್ಯಕ್ರಮವನ್ನು ಮಂಜೂರು ಮಾಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಸುಮಾರು 16,800 ಕಿಲೋಮೀಟರು ರಸ್ತೆಗಳ ಕೆಲಸವನ್ನು ಕೈಕೊಳ್ಳಲಾಗುವುದು. ಇದರಲ್ಲಿ ಹೊಸ ರಸ್ತೆಗಳ ನಿರ್ಮಾಣ, ಈಗ ಇರುವ ರಸ್ತೆಗಳ ಮೇಲ್ದರ್ಜೆಗೆ ಇವೆರಡೂ ಸೇರುತ್ತವೆ. ಬೇರೆ ಬೇರೆ ಕಾರ್ಯ ಯೋಜನೆಗಳ ಮೇರೆಗೆ ಪ್ರಾರಂಭಿಸಲು ಕೈಕ್ಕೊಂಡಿರುವ

V-731 N73
N73

5,350 ಕಿಲೋಮೀಟರುಗಳಷ್ಟು ಗ್ರಾಮಾಂತರ ರಸ್ತೆಗಳ ಕೆಲಸದ ಜೊತೆಗೆ ಹೆಚ್ಚಿಗೆಯಾಗಿ ಈ ಕೆಲಸ ನಡೆಯಲಿದೆ, ಈ ಕಾರ್ಯಕ್ಕೆ ಸುಮಾರು 28 ಕೋಟಿ ರೂಪಾಯಿಗಳ ವೆಚ್ಚ ತಗಲುವ ಸಂಭವವಿದೆ. ಇದನ್ನು ಮೂರು ಹಂತಗಳಲ್ಲಿ ನಿರ್ವಹಿಸಲಾಗುವುದು.

ಆಹಾರದ ಹಂಚಿಕೆ ಮತ್ತು ಸಂಗ್ರಹಣೆ.

ಲೆವಿ ಆದೇಶದ ಮೇರೆಗೆ ಆಹಾರ ಧಾನ್ಯಗಳನ್ನು ಕಟ್ಟುನಿಟ್ಟಾಗಿ ಸಂಗ್ರಹಿಸುವುದಲ್ಲದೆ, ಆಹಾರ ಧಾನ್ಯಗಳನ್ನು ವ್ಯಾಪಾರಿಗಳಿಂದಲೂ ಬೇರೆಯವರಿಂದಲೂ ಹಿಡಿದುಕೊಂಡು, ಸಹಕಾರಿ ಸಂಸ್ಥೆಗಳ ಮತ್ತು ನ್ಯಾಯ ಬೆಲೆ ಅಂಗಡಿಗಳ ಮೂಲಕ ಹಂಚಲಾಗುತ್ತದೆ. ಸುಮಾರು 13,149 ನ್ಯಾಯ ಬೆಲೆ ಅಂಗಡಿಗಳನ್ನು ಸ್ಥಾಪಿಸಲಾಗಿದೆ.

ನಮ್ಮ ಸರ್ಕಾರದವರು ಅಕ್ಕಿ ಮತ್ತು ಗೋಧಿಯ ಸಗಟು ವ್ಯಾಪಾರವನ್ನು ವಹಿಸಿಕೊಳ್ಳಲು ನಿರ್ಧರಿಸಿದ್ದಾರೆ. ಈ ನಿರ್ಧಾರವನ್ನು ಮುಂದಿನ ವರ್ಷ ಕಾರ್ಯರೂಪಕ್ಕೆ ತರಲಾಗುವುದು.

ಉದ್ದಿಮೆಗಳು:

ದೊಡ್ಡ ಪ್ರಮಾಣದ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿಗೆ ಸಾಕಷ್ಟು ಪ್ರಾಧಾನ್ಯ ಕೊಡಲಾಗಿದೆ. ಸಣ್ಣ ಪ್ರಮಾಣದ ಉದ್ದಿಮೆಗಳ ಮತ್ತು ಗ್ರಾಮೋದ್ಯಮಗಳ ಅಭಿವೃದ್ಧಿಗೂ ಅಷ್ಟೇ ಗಮನ ಕೊಡಲಾಗಿದೆ.

"ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಲಿಮಿಟೆಡ್" ಕಾರ್ಖಾನೆಯ ಕೆಲಸವೇ 1973ನೇ ಇಸವಿಯಲ್ಲಿ ನಿರ್ವಹಿಸಿರುವ ದೊಡ್ಡ ಹೊಣೆ. ಈ ಸಂಸ್ಥೆ ಶ್ಲಾಘ್ಯವಾದ ಪ್ರಗತಿ ಸಾಧಿಸಿದೆ. ಇದರ ಜೊತೆಗೆ ವಿಜಯನಗರ ಉಕ್ಕಿನ ಕಾರ್ಖಾನೆಯೂ ಕುದುರೆಮುಖ ಕಬ್ಬಿಣದ ಅದಿರು ಯೋಜನೆಯೂ ಬೇಗನೆ ರೂಪತಳೆಯುವ ನಿರೀಕ್ಷೆಯಿದೆ.

80 ಕೋಟಿ ರೂಪಾಯಿ ವೆಚ್ಚದ ರೇಷ್ಮೆ ಅಭಿವೃದ್ಧಿಯ ವ್ಯಾಪಕ ಕಾರ್ಯಕ್ರಮ ಕಾರ್ಯಗತವಾಗುತ್ತದೆ. ಈ ಕಾರ್ಯಕ್ರಮದ ಅವಧಿ ಹತ್ತು ವರ್ಷ. ರೇಷ್ಮೆ ಅಭಿವೃದ್ಧಿಗೆ ಸದೃಢ ತಳಹದಿ ಹಾಕುವುದಷ್ಟೇ ಅಲ್ಲದೆ, ಈ ಉದ್ದಿಮೆ ಸುಭದ್ರವಾಗಿ ನೆಲಸಿರುವ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುವುದೂ ಈ ಯೋಜನೆಯ ಉದ್ದೇಶ.

ಕುಟುಂಬ ಯೋಜನೆ.

ಜನಾರೋಗ್ಯ ಮತ್ತು ನೈರ್ಮಲ್ಯ ಸ್ಥಿತಿಗತಿಗಳು ಉತ್ತಮಗೊಂಡಿವೆ; ಸಾಂಕ್ರಾಮಿಕ ರೋಗಗಳು ನಿಯಂತ್ರಿತವಾಗಿವೆ. ಅದುದರಿಂದ ಮರಣ ಪ್ರಮಾಣವು ಗಮನಾರ್ಹವಾಗಿ ಕಡಿಮೆಯಾಗಿರುವುದೇನೋ ನಿಜ. ಹೀಗಿದ್ದರೂ, ಕುಟುಂಬ ಯೋಜನಾ ಕಾರ್ಯಕ್ರಮದ ಪ್ರಕಾರ ಜನನಸಂಖ್ಯಾ ನಿಯಂತ್ರಣಕ್ಕೆ ನಿರ್ವ ಪ್ರಯತ್ನ ನಡೆಯುತ್ತಿದ್ದರೂ ಸಹ, ಜನನ ಪ್ರಮಾಣವು ದಿನೇದಿನೇ ಹೆಚ್ಚುತ್ತಲೇ ಬಂದಿದೆ. ಆದ್ದರಿಂದ, ಸರ್ಕಾರದವರು ಸುಮಾರು 575 ಲಕ್ಷ ರೂಪಾಯಿ ವೆಚ್ಚದ ತೀವ್ರ ಕುಟುಂಬ ಯೋಜನಾ ಕಾರ್ಯಕ್ರಮವನ್ನು 1973—74ರಲ್ಲಿ ಕೈಕೊಳ್ಳಲಿದ್ದಾರೆ. ಇದಕ್ಕೆ ಶೇಕಡಾ 100 ರಷ್ಟು ಕೇಂದ್ರದ ಸಹಾಯ ದೊರೆಯುವುದು, ವಿಶ್ವಬ್ಯಾಂಕಿನ ಸಹಾಯದಿಂದ ಬೆಂಗಳೂರು ವಿಭಾಗದಲ್ಲಿ ಭಾರತ ಜನಸಂಖ್ಯಾ ಯೋಜನೆ ಪ್ರಾರಂಭವಾಗಿದೆ. ಈ ಯೋಜನೆಗೆ ಮುಂದಿನ ಐದು ವರ್ಷಗಳಲ್ಲಿ 11.5 ಕೋಟಿ ವೆಚ್ಚ ತಗಲುವುದೆಂದು ಅಂದಾಜು ಮಾಡಲಾಗಿದೆ. ಈ ಅವಧಿ ಮುಗಿಯುವುದರೊಳಗೆ ಈಗಿನ 38/1000 ಜನರ ಪ್ರಮಾಣವು 25/1000ಕ್ಕೆ ಇಳಿಯುವ ನಿರೀಕ್ಷೆ ಇದೆ.

ಭಾರತೀಯ ವೈದ್ಯ ಪದ್ಧತಿ.

ಭಾರತೀಯ ವೈದ್ಯ ಪದ್ಧತಿಗಳಿಗೆ ಉತ್ತೇಜನ ಕೊಡುವ ಉದ್ದೇಶದಿಂದ ಭಾರತೀಯ ವೈದ್ಯ ಇಲಾಖೆ ಎಂಬ ಪ್ರತ್ಯೇಕ ಇಲಾಖೆಯನ್ನು ರಚಿಸಲಾಗಿದೆ. ಅಲ್ಲದೆ ಬೆಂಗಳೂರಿನ ಸರ್ಕಾರಿ ಆಯುರ್ವೇದ ಕಾಲೇಜಿನಲ್ಲಿ ಸ್ನಾತಕೋತ್ತರ ವ್ಯಾಸಂಗಗಳನ್ನು ಪ್ರಾರಂಭಿಸುವುದಕ್ಕೂ ಕ್ರಮ ಕೈಕೊಳ್ಳಲಾಗಿದೆ.

ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯ.

ಎಲ್ಲ ವೈದ್ಯಪದ್ಧತಿಗಳ ಸಮನ್ವಯಕ್ಕಾಗಿ ಸರ್ಕಾರದವರು ಒಂದು ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಉದ್ದೇಶವಿಟ್ಟುಕೊಂಡಿದ್ದಾರೆ. ಈ ವಿಷಯದಲ್ಲೂ ಕ್ರಮ ಕೈಕೊಳ್ಳಲಾಗುತ್ತಿದೆ.

ಸಮಾಜ ಕಲ್ಯಾಣ.

ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರದವರು ಮುಂದೆಯೂ ವಿಶೇಷ ಗಮನ ಕೊಡುತ್ತಲೇ ಇರುವರು. ಮುಂದಿನ 2 ತಿಂಗಳಿಗೆ ಈ ಉದ್ದೇಶಕ್ಕಾಗಿ ಇನ್ನಷ್ಟು ಹೆಚ್ಚಿನ ಹಣ ಒದಗಿಸಲಾಗುವುದು.

ಹರಿಜನ, ಗಿರಿಜನ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಇಲ್ಲದೆ ವ್ಯಾಸಂಗ ವೇತನ ಕಾರ್ಯಕ್ರಮಗಳ ಪ್ರಯೋಜನ ನೀಡಲು ಸರ್ಕಾರದವರು ಕೈಕೊಂಡ ಕಾರ್ಯನೀತಿಯು ಯಶಸ್ವಿಯಾಗಿದೆ.

ಹರಿಜನ ಬಾಲಕ ಬಾಲಕಿಯರ ಸರ್ಕಾರಿ ಹಾಸ್ಟೆಲುಗಳಿಗಾಗಿ 60 ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರದವರು ಮಂಜೂರಾತಿ ಕೊಟ್ಟಿದ್ದಾರೆ. ಈ ಬಗ್ಗೆ ತಗಲುವ ವೆಚ್ಚದಲ್ಲಿ ಅವರ ಪಾಲು 28.75 ಲಕ್ಷ ರೂಪಾಯಿ. ಹಾಸ್ಟೆಲುಗಳ ಕಾರ್ಯರೀತಿಯು ಸುಧಾರಣೆಗೆ ಹಾಸ್ಟೆಲು ಸಮಿತಿ ಮಾಡಿದ ಶಿಫಾರಸುಗಳನ್ನು ಅಂಗೀಕರಿಸಲಾಗಿದೆ. ಈ ಉದ್ದೇಶಕ್ಕೆ ಹೆಚ್ಚಿನ ಹಣ ಒದಗಿಸುವ ನಿರೀಕ್ಷೆಯಿದೆ.

ಕೊಳಚೆ ಪ್ರದೇಶಗಳಲ್ಲಿ ವಾಸವಾಗಿರುವ ಮಕ್ಕಳ ವಿಶಿಷ್ಟ ಪೋಷಣ ಕಾರ್ಯಕ್ರಮದ ವ್ಯಾಪ್ತಿಯನ್ನು ಹೆಚ್ಚಿಸಲಾಗಿದೆ.

ಮನೆ ನಿವೇಶನಗಳ ಕೊಡುಗೆ ಮತ್ತು ವಸತಿ ನಿರ್ಮಾಣ.

ಬೆಂಗಳೂರು ನಗರದಲ್ಲಿ ಮನೆಯಿಲ್ಲದವರು ಮತ್ತು ನಿವೇಶನ ರಹಿತರು ಅನುಭವಿಸುವ ಸಂಕಟಗಳನ್ನು ನಿವಾರಿಸಿ, ಹರಿಜನ ಗಿರಿಜನರಿಗೂ ಆರ್ಥಿಕವಾಗಿ ಹಿಂದುಳಿದ ಇತರ ವರ್ಗದವರಿಗೂ ನಿವೇಶನ ಹಂಚಿಕೆಯ ವಿಷಯದಲ್ಲಿ ಸಾಮಾಜಿಕ ನ್ಯಾಯ ಒದಗಿಸುವ ಉದ್ದೇಶದಿಂದ, ಈ ವರ್ಗಗಳ ಜನರ ಬಗ್ಗೆ ಸಾಕಷ್ಟು ನಿವೇಶನ ವಿಂಗಡಣೆಗೆ ಅವಕಾಶ ಕಲ್ಪಿಸುವ ಹೊಸನಿಯಮಾವಳಿಯನ್ನು ಹೊರಡಿಸಲಾಗಿದೆ. ಈ ನಿಯಮಾವಳಿಯು ಬೆಂಗಳೂರು ಮತ್ತು ಮೈಸೂರು ನಗರಾಭಿವೃದ್ಧಿ ಮಂಡಲಿಗಳು ಹಂಚುವ ನಿವೇಶನಗಳಿಗೆ ಅನ್ವಯಿಸುವುದು.

ಭೂಹೀನರಾದ ಗ್ರಾಮೀಣ ಕೃಷಿಕರಿಗೆ ಹಂಚಿಕೆಯಾದ ಮೂರು ಲಕ್ಷ ನಿವೇಶನಗಳಲ್ಲಿ ಅಗ್ಗದ ಮನೆಗಳನ್ನು ಕಟ್ಟುವ ಒಂದು ಯೋಜನೆಯನ್ನು ಮೈಸೂರು ಗೃಹ ನಿರ್ಮಾಣ ಮಂಡಲಿಯು ಪರಿಶೀಲಿಸುತ್ತಿದೆ. ಈ ಸಂಬಂಧದಲ್ಲಿ ಮಂಡಲಿಯು ಭಾರತದ ಜೀವ ವಿಮಾ ಕಾರ್ಪೊರೇಷನ್ ಮತ್ತು ಗೃಹನಿರ್ಮಾಣ ಹಾಗೂ ನಗರಾಭಿವೃದ್ಧಿ ಕಾರ್ಪೊರೇಷನ್‌ನೊಡನೆ ಸಮಾಲೋಚನೆ ನಡೆಸಿದೆ. ಈ ಯೋಜನೆಯ ಮೇರೆಗೆ ಸುಮಾರು 5 ಕೋಟಿ ರೂಪಾಯಿ ವೆಚ್ಚದಲ್ಲಿ 20,000 ಮನೆಗಳನ್ನು ಕಟ್ಟಲಾಗುವುದು. ಈ ಕೆಲಸವನ್ನು ಮೊದಲು ಗೃಹ ನಿರ್ಮಾಣ ಮಂಡಲಿಯು ಸ್ವಂತ ಹಣದಿಂದ ಪ್ರಾರಂಭಿಸುವುದು.

ಗ್ರಾಮಾಂತರ ಮತ್ತು ನಗರ ನೀರು ಸರಬರಾಜು.

(ಅ) ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಕಾರ್ಯಕ್ರಮ

ರಾಷ್ಟ್ರೀಯ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಗೆ ಸರ್ಕಾರದವರು ಸೂಕ್ತ ಮಹತ್ವ ಕೊಡುತ್ತಲಿದ್ದಾರೆ. ಈ ಕಾರ್ಯಕ್ರಮದ ಮೇರೆಗೆ ನಾಲ್ಕನೆಯ ಯೋಜನಾ ಪ್ರಾರಂಭದಿಂದ ೨22.26 ಲಕ್ಷ ರೂಪಾಯಿ ವೆಚ್ಚದ ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ. ಪ್ರಸಕ

ವರ್ಷದಲ್ಲಿ ಕನಿಷ್ಠ ಪಕ್ಷ 300 ಕಾಮಗಾರಿಗಳಾದರೂ ಮುಗಿಯುವ ನಿರೀಕ್ಷೆ ಇದೆ. ಆಯವ್ಯಯ ಪತ್ರದಲ್ಲಿ ಒದಗಿಸಿದ 200 ಲಕ್ಷ ರೂಪಾಯಿ ಹಣವನ್ನು ಪುನಕ್ಕ ವರ್ಷ ವೆಚ್ಚ ಮಾಡಲಾಗುವುದು. ಮುಂದಿನ ವರ್ಷ ಈ ಕಾರ್ಯಕ್ರಮಕ್ಕೆ ಇನ್ನಷ್ಟು ಹೆಚ್ಚಿನ ಹಣ ವೆಚ್ಚವಾಗುವ ನಿರೀಕ್ಷೆ ಇದೆ.

ನೀರಿನ ತೊಂದರೆ ಪ್ರದೇಶಗಳಿಗೆ ನೀರೊದಗಿಸುವ ಉದ್ದೇಶದಿಂದ ಸಮಗ್ರ ದೇಶಕ್ಕೆ 20 ಕೋಟಿ ರೂಪಾಯಿ ವೆಚ್ಚದ ನೀರು ಸರಬರಾಜಿನ ತ್ವರಿತ ಕಾರ್ಯಕ್ರಮವೊಂದನ್ನು ಭಾರತ ಸರ್ಕಾರದವರು ಕೈಕೊಂಡಿದ್ದಾರೆ. ಪುನಕ್ಕ ವರ್ಷಕ್ಕೆ ಈ ಕಾರ್ಯಕ್ರಮದ ಬಗ್ಗೆ ಒಂದು ಕೋಟಿ ರೂಪಾಯಿ ಹಣ ಪಡೆಯಲಾಗಿದೆ. ಈ ಕಾರ್ಯಕ್ರಮದ ಮೇರೆಗೆ 6 ಜಿಲ್ಲೆಗಳಲ್ಲಿ ನೀರೊದಗಿಸುವ 120 ಯೋಜನೆಗಳನ್ನು ಈಗಾಗಲೇ ಮಂಜೂರು ಮಾಡಲಾಗಿದೆ.

ರಾಜ್ಯದ 12 ಪಟ್ಟಣಗಳಲ್ಲಿ ಚರಂಡಿ ವ್ಯವಸ್ಥೆ ಒದಗಿಸಲಾಗಿದೆ. ಇದರಿಂದ 22.87 ಲಕ್ಷ ಜನತೆಗೆ ಅನುಕೂಲವಾಗುವುದು. 1,745 ಲಕ್ಷ ರೂಪಾಯಿ ವೆಚ್ಚದ 25 ನೀರು ಸರಬರಾಜುವ್ಯವಸ್ಥೆ ಯೋಜನೆಗಳಿಗೂ 974 ಲಕ್ಷ ರೂಪಾಯಿ ವೆಚ್ಚದ 20 ಚರಂಡಿ ನಿರ್ಮಾಣ ಯೋಜನೆಗಳಿಗೂ ಜೀವ ವಿಮಾ ಕಾರ್ಪೋರೇಷನ್ ಸಹಾಯ ಯೋಜನೆಯ ಮೇರೆಗೆ ಮಂಜೂರಾತಿ ನೀಡಲಾಗಿದೆ. ಈ ಯೋಜನೆಗಳ ಕೆಲಸ ಬೇರೆ ಬೇರೆ ಹಂತಗಳಲ್ಲಿ ಮುಂದುವರಿಯುತ್ತಿದೆ.

1973-74ನೇ ವರ್ಷದಲ್ಲಿ 22 ಪಟ್ಟಣಗಳಿಗೆ ನೀರು ಸರಬರಾಜು ಯೋಜನೆಯನ್ನು 2 ಪಟ್ಟಣಗಳಿಗೆ ಚರಂಡಿ ಸೌಕರ್ಯವನ್ನೂ ಒದಗಿಸುವ ಉದ್ದೇಶವಿದೆ.

(ಆ) ಕುಡಿಯುವ ನೀರಿನ ಬಾವಿ ಕಾರ್ಯಕ್ರಮ.—

ರಾಜ್ಯದ ಪ್ರತಿಯೊಂದು ಗ್ರಾಮಕ್ಕೂ ಕೂಡಿಯುವ ನೀರಿನ ಬಾವಿ ಒದಗಿಸುವ ಪರಿಣಾಮಕಾರಿ ಕಾರ್ಯಕ್ರಮಕ್ಕೆ ಸರ್ಕಾರದವರು ಆದ್ಯತೆ ನೀಡಿದ್ದಾರೆ. ಆದ್ದರಿಂದ ಈ ಉದ್ದೇಶಕ್ಕಾಗಿ ಹೆಚ್ಚಿನ ಹಣ ಒದಗಿಸಲಾಗಿದೆ. ನಾಲ್ಕನೆಯ ಪಾಂಚವರ್ಷಿಕ ಯೋಜನಾವಧಿಯ ಅಂತ್ಯ ದೊಳಗೆ ರಾಜ್ಯದ ಎಲ್ಲ ಮುಖ್ಯ ಗ್ರಾಮಗಳಿಗೂ ಕುಡಿಯುವ ನೀರಿನ ಬಾವಿ ಸೌಕರ್ಯ ಒದಗಿಸುವಂತೆ 1,460 ಮುಖ್ಯ ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಲಾಗುವುದು.

(ಇ) ನಗರ ನೀರು ಸರಬರಾಜು.

ರಾಜ್ಯದ 239 ಪಟ್ಟಣಗಳ ಪೈಕಿ 155 ಪಟ್ಟಣಗಳಿಗೆ ಸುರಕ್ಷಿತ ನೀರು ಸರಬರಾಜು ಒದಗಿಸಲಾಗಿದೆ. ಇದರಿಂದ 60.49 ಲಕ್ಷ ಜನರಿಗೆ ನೀರು ಪೂರೈಕೆಯಾಗುವುದು. ಸರ್ಕಾರದವರು ಈ ಕಾರ್ಯಕ್ರಮದ ಮೇರೆಗೆ 37 ಕಾಮಗಾರಿಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ. ಇವುಗಳ ಕೆಲಸ ಬೇರೆ ಬೇರೆ ಹಂತಗಳಲ್ಲಿ ಮುಂದುವರಿಯುತ್ತಲಿದೆ.

(ಈ) ಬೆಂಗಳೂರು ಜಲ ಮಂಡಲಿ.

ನಗರಕ್ಕೆ ಕಾವೇರಿ ನದಿಯಿಂದ 30 ಕೋಟಿ ರೂಪಾಯಿ ವೆಚ್ಚದಲ್ಲಿ ನೀರು ಸರಬರಾಜು ಮಾಡುವ ಯೋಜನೆಯ ಮೊದಲನೆಯ ಹಂತದ ಕೆಲಸ ತೀವ್ರಗತಿಯಿಂದ ಮುಂದುವರಿಯುತ್ತಲಿದೆ. 1973ರ ಅಂತ್ಯದೊಳಗಾಗಿ ಈ ಕೆಲಸ ಮುಕ್ತಾಯವಾಗುವುದು.

ಸಹಕಾರಿ ಮಾರುಕಟ್ಟೆ ವ್ಯವಸ್ಥೆ.

ಮೈಸೂರು ರಾಜ್ಯದಲ್ಲಿ ನಿಯಂತ್ರಿತ ಮಾರುಕಟ್ಟೆ ಅಭಿವೃದ್ಧಿಗೆ 43 ಕೋಟಿ ರೂಪಾಯಿ ವೆಚ್ಚದ ಯೋಜನೆಯೊಂದನ್ನು ಭಾರತ ಸರ್ಕಾರದ ಮೂಲಕ ವಿಶ್ವ ಬ್ಯಾಂಕಿನ ಪರಿಶೀಲನೆಗೆ ಕಳುಹಿಸಲಾಗಿದೆ. ವಿಶ್ವ ಬ್ಯಾಂಕಿನ ಅಧೀನ ಸಂಸ್ಥೆಯಾದ ಅಂತರ ರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯು ಈ ಯೋಜನೆಯ ಪರಿಶೀಲನೆಗಾಗಿ ಸಮೀಕ್ಷಾ ನಿಯೋಗವೊಂದನ್ನು ಕಳಿಸಿತ್ತು. ಈ ನಿಯೋಗವು ಮುಖ್ಯ ಮಾರುಕಟ್ಟೆಗಳನ್ನು ಸಂದರ್ಶಿಸಿದುದಲ್ಲದೆ, ರಾಜ್ಯದ ಪ್ರತಿನಿಧಿಗಳೊಡನೆ ಚರ್ಚೆ ನಡೆಸಿತು. ವಿಶ್ವ ಬ್ಯಾಂಕು ಈ ಯೋಜನೆಯನ್ನು ಬೇಗನೆ ಪರಿಶೀಲನೆಗೆ ತೆಗೆದುಕೊಳ್ಳಲಿದೆ

"ಮಾರ್ಕೆಟ್ ಕಾಂಪ್ಲೆಕ್ಸ್".

ತುಂಗಭದ್ರಾ ಯೋಜನಾ ಪ್ರದೇಶದಲ್ಲಿ ಮಾರುಕಟ್ಟೆ ಸೌಲಭ್ಯಗಳ ಸುವ್ಯವಸ್ಥಿತ ಅಭಿವೃದ್ಧಿಗಾಗಿ ವ್ಯಾಪಕ ಯೋಜನೆಯೊಂದನ್ನು 1969-70ರಲ್ಲಿ ಕೈಗೆಕೊಳ್ಳಲಾಗಿತ್ತು. ಈ ಯೋಜನೆ ಮುಂದುವರಿಯುತ್ತಲಿದೆ. ಈ ಪ್ರದೇಶದಲ್ಲಿ ಮೂಲ ಸೌಲಭ್ಯಗಳನ್ನು ಬಲಪಡಿಸುವುದಕ್ಕೆ ಅವಕಾಶ ಕಲ್ಪಿಸಿರುವ ಈ ಯೋಜನೆಯ ಎರಡನೇ ಹಂತಕ್ಕೆ ಸುಮಾರು 3 ಕೋಟಿ ರೂಪಾಯಿ ವೆಚ್ಚ ಮಾಡುವ ಉದ್ದೇಶವಿದೆ. ಈ ಯೋಜನೆಯು ಮೂರು ವರ್ಷಗಳಲ್ಲಿ ಮುಗಿಯುವುದು.

ನಿರುದ್ಯೋಗ ಮತ್ತು ಪರಿಹಾರ ಕ್ರಮಗಳು.

ಬಡಜನರಿಗೆ ಉದ್ಯೋಗ ಒದಗಿಸುವುದಕ್ಕಾಗಿಯೂ ಕ್ಷಾಮ ಪರಿಸ್ಥಿತಿ ಪದೇ ಪದೇ ಸಂಭವಿಸದಂತೆ ತಡೆಗಟ್ಟಲು ಖಾಯಂ ಸ್ವತ್ತುಗಳನ್ನು ನಿರ್ಮಿಸುವುದಕ್ಕಾಗಿಯೂ ಕೈಕೊಂಡಿರುವ ಆನಾವೃಷ್ಟಿ ಪ್ರದೇಶ ಕಾರ್ಯಕ್ರಮದಲ್ಲಿ ಗಮನಾರ್ಹ ಪ್ರಗತಿಯಾಗಿದೆ. ಈ ಯೋಜನೆಯು ರಾಜ್ಯದ 42 ಆಯ್ಕೆ ತಾಲ್ಲೂಕುಗಳಲ್ಲಿ ಜಾರಿಯಲ್ಲಿದೆ. ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಇನ್ನಷ್ಟು ತೀವ್ರಗತಿಯಿಂದ ಮುಂದೊತ್ತುವ ಉದ್ದೇಶವಿದೆ. ಈ ಬಗ್ಗೆ ನಲಹೆಗಳನ್ನು ವಿಶ್ವಬ್ಯಾಂಕಿನ ಪರಿಶೀಲನೆಗಾಗಿ ಭಾರತ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ಇನ್ನುಳಿದ ಎರಡು ಯೋಜನೆಗಳು—ಎಂದರೆ ಉದ್ಯೋಗಾವಕಾಶದ ತ್ವರಿತ ಯೋಜನೆ, ಮತ್ತು ಗ್ರಾಮಾಂತರ ಉದ್ಯೋಗಾವಕಾಶದ ತೀವ್ರ ಪ್ರಾಯೋಗಿಕ ಯೋಜನೆ.—ಇವು ಮುಂದುವರಿಯುತ್ತಿವೆ.

ಕಸಬುದಾರರ ತರಬೇತಿ ಯೋಜನೆ, ಉಮೇದುವಾರರ ತರಬೇತಿ ಯೋಜನೆ—ಇವೆರಡು ಯೋಜನೆಗಳ ಕಾರ್ಯಕ್ರಮಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ತ್ವರಿತಗೊಳಿಸಲು ಉದ್ಯೋಗ ಮತ್ತು ತರಬೇತಿ ಇಲಾಖೆಯು ಈಗಾಗಲೇ ಹಲವಾರು ಕ್ರಮಗಳನ್ನು ಕೈಕೊಂಡಿದೆ

ವಿಮಾನಗಾರಿಕೆ.

ಕಾರವಾರದಲ್ಲಿ ಇಂಡೊ-ನಾರ್ವೆಜಿಯನ್ ಯೋಜನೆಯ ಮೇರೆಗೆ 25.00 ಲಕ್ಷ ರೂಪಾಯಿ ವೆಚ್ಚದಿಂದ ಕೈಕೊಂಡಿರುವ ವಿಮಾನಗಾರಿಕೆ ಬಂದರು ನಿರ್ಮಾಣ ಕಾರ್ಯವು ಪೂರ್ಣಗೊಂಡಿದೆ.

ಮೈಸೂರು ರಾಜ್ಯದ ವಿಮಾನಗಾರಿಕೆ ಅಭಿವೃದ್ಧಿ ಕಾರ್ಪೊರೇಷನ್ ಸಂಸ್ಥೆಯು ಹಿಮಯಂತ್ರ ಚಾಲನೆ, ಘನೀಕರಣ ಮತ್ತು ದೋಣಿ ನಿರ್ಮಾಣದ ಅಂಗಣಗಳ ಜೊತೆಗೆ ಮತ್ಸ್ಯ ಸಂಸ್ಕರಣವನ್ನೂ ಒಳನಾಡುಗಳಲ್ಲಿ ವಿಮಾನ ಮಾರಾಟ ವ್ಯವಸ್ಥೆಯನ್ನೂ ಕೈಕೊಂಡಿದೆ. ಈ ಕಾರ್ಪೊರೇಷನ್ ಸಂಸ್ಥೆಯು ಇದುವರೆಗೆ ಸುಮಾರು 12 ಲಕ್ಷ ರೂಪಾಯಿ ಮೌಲ್ಯದ ಹಿಮಗಟ್ಟಿದ ಸಿಗಡಿಯನ್ನೂ ಇನ್ನಿತರ ಸಾಗರೋತ್ಪನ್ನಗಳನ್ನೂ ರಫ್ತು ಮಾಡಿದೆ.

ಒಳನಾಡಿನ ವಿಮಾನಗಾರಿಕೆ ವಿಚಾರದಲ್ಲಿ ವಿಮಾನಮರಿಯ ಉತ್ಪಾದನೆ ಮತ್ತು ಹಂಚಿಕೆಯ ಕಾರ್ಯವು ಅದೇ ವೇಗದಲ್ಲಿ ಮುಂದುವರಿಯುತ್ತಿದೆ.

ವಿದ್ಯಾಭ್ಯಾಸ.

ವಿದ್ಯಾ ಸೌಲಭ್ಯಗಳನ್ನು ವಿಸ್ತರಿಸುವುದೇ ಅಲ್ಲದೆ, ವಿದ್ಯಾ ಸಂಸ್ಥೆಗಳಲ್ಲಿ ದೊರೆಯುವ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದಕ್ಕೂ ನಮ್ಮ ಸರ್ಕಾರದವರು ಆಪೇಕ್ಷೆ ಕಾತರರಾಗಿದ್ದಾರೆ.

ಪ್ರಾಥಮಿಕ ಶಿಕ್ಷಣ.

6 ರಿಂದ 11 ವರ್ಷದ ವರೆಗಿನ ವಯೋವರ್ಗದ ಮಕ್ಕಳಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುವ ಯತ್ನದಲ್ಲಿ ಆ ವಯೋವರ್ಗದ ಮಕ್ಕಳ ಪೈಕಿ ಶೇಕಡಾ 92 ರಷ್ಟಾದರೂ ಮಕ್ಕಳನ್ನು ಶಾಲೆಗೆ ಸೇರಿಸಲು ಸರ್ಕಾರದವರು ಯತ್ನಿಸುವರು. ಅದರ ಪರಿಣಾಮವಾಗಿ, ಶಾಲಾ ಶಿಕ್ಷಣಕ್ಕೆ ಒದಗಿಸಿರುವ ಒಟ್ಟು ಹಣದಲ್ಲಿ ಅರ್ಧಾಂಶದಷ್ಟಕ್ಕೂ ಹೆಚ್ಚಿನ ಹಣವನ್ನು ಈ ಕಾರ್ಯಕ್ರಮಕ್ಕೆ ವೀಸಲಿಡಲಾಗಿದೆ.

ಸೆಕೆಂಡರಿ ವಿದ್ಯಾಬ್ಯಾಸ.

ಸೆಕೆಂಡರಿ ವಿದ್ಯಾಭ್ಯಾಸದ ಸೌಲಭ್ಯವನ್ನು ಹೆಚ್ಚಿಸುವುದಕ್ಕಾಗಿ, 58 ಹೊಸ ಹೈಸ್ಕೂಲು ಗಳನ್ನು ತೆರೆಯಲು ಖಾಸಗಿ ಆಡಳಿತ ವರ್ಗಗಳಿಗೆ ಅನುಮತಿ ಕೊಡಲಾಗಿದೆ. ಜೊತೆಗೆ, 14 ಸರ್ಕಾರಿ ಹೈಸ್ಕೂಲುಗಳನ್ನೂ ಪ್ರಾರಂಭಿಸಲಾಗಿದೆ. ಎರಡು ವರ್ಷದ ಪಿ.ಯು.ಸಿ. ವ್ಯವಸ್ಥೆಯ ಪದ್ಧತಿ ಪ್ರಾರಂಭವಾದುದರಿಂದ, ಈಗಿನ ಹೈಯರ್ ಸೆಕೆಂಡರಿ ಸ್ಕೂಲುಗಳನ್ನು ಜೂನಿಯರ್ ಕಾಲೇಜುಗಳನ್ನಾಗಿ ಪರಿವರ್ತಿಸುವುದು ಅವಶ್ಯವಾಯಿತು. ಅಂಥಾ 243 ಶಾಲೆಗಳು ಜೂನಿಯರ್ ಕಾಲೇಜುಗಳಾಗಿ ಪರಿವರ್ತನೆ ಹೊಂದಿವೆ.

ಮಧ್ಯಾಹ್ನದ ಊಟದ ವ್ಯವಸ್ಥೆ.

ಶಾಲಾ ಮಕ್ಕಳಿಗೆ ಮಧ್ಯಾಹ್ನ ಊಟ ನೀಡುವ ವ್ಯವಸ್ಥೆ ಮುಂದುವರಿಯುತ್ತಿದೆ. ಈ ಯೋಜನೆಯ ಮೇರೆಗೆ ಅಭಾವ ಪೀಡಿತವಾದ 66 ತಾಲ್ಲೂಕುಗಳಲ್ಲಿ ನಾಕಷ್ಟು ಆಹಾರ ಸಿಗದಿರುವ ಮಕ್ಕಳಿಗೆ ತುರ್ತು ಆಹಾರ ನೀಡಿಕೆ ಕಾರ್ಯಕ್ರಮವು ಮುಂದುವರಿಯುತ್ತಿದೆ. 614 ಮತ್ತು 620 ನೆಯ ಜಾಗತಿಕ ಆಹಾರ ಕಾರ್ಯಕ್ರಮ ಯೋಜನೆಗಳು ಸೆಪ್ಟೆಂಬರ್ 1972ರಿಂದ ಪ್ರಾರಂಭ ವಾದುವು. ಇವೆರಡೂ ಯೋಜನೆಗಳ ಮೇರೆಗೆ ಸುಮಾರು 92,000 ವಿದ್ಯಾರ್ಥಿಗಳಿಗೆ ಆಹಾರ ದೊರೆಯುತ್ತದೆ.

ಕಾಲೇಜು ಶಿಕ್ಷಣ.

ಖಾಸಗಿ ಕಾಲೇಜುಗಳಿಗೆ ಇನ್ನಷ್ಟು ಸಹಾಯ ನೀಡುವ ಉದ್ದೇಶದಿಂದ ಈ ವರೆಗೆ ಅಧಿಕೃತ ವೆಚ್ಚದ ಹೆಚ್ಚಿಕೆ ಶೇಕಡಾ 70ರವರೆಗೆ ಕೊಡುತ್ತಿದ್ದ ಪರಿಪೋಷಣ ಗ್ರಾಂಟನ್ನು ಪುನಕ್ರ ವರ್ಷದಿಂದ ಶೇಕಡಾ 80ಕ್ಕೆ ಹೆಚ್ಚಿಸಲಾಗಿದೆ.

ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಕಾಲೇಜು ಮಟ್ಟದಲ್ಲಿ ಶಿಕ್ಷಣ ಮಾಧ್ಯಮವನ್ನಾಗಿ ಬಳಸುವ ಕಾರ್ಯ ನೀತಿಯನ್ನು 10 ಕಾಲೇಜುಗಳಲ್ಲಿ ಅನುಷ್ಠಾನಕ್ಕೆ ತರಲಾಗಿದೆ. ಈ ಸಂಬಂಧ ವಾಗಿ, ಸುಮಾರು 9 ಲಕ್ಷ ರೂಪಾಯಿಯನ್ನು ರಾಜ್ಯದ ವಿಶ್ವವಿದ್ಯಾನಿಲಯಗಳಿಗೆ ಪ್ರಾದೇಶಿಕ ಭಾಷೆಗಳಲ್ಲಿ ಪಠ್ಯ ಪುಸ್ತಕ ತಯಾರಿಕೆಗಾಗಿ ಮಂಜೂರು ಮಾಡಲಾಗಿದೆ. ವಿಶ್ವ ವಿದ್ಯಾನಿಲಯಗಳು ಕನ್ನಡದಲ್ಲಿ ಸುಮಾರು 200 ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿವೆ.

ಯುವಜನ ಸೇವೆ.

ಈ ವರ್ಷ ಯುವಜನ ಸೇವಾ ಇಲಾಖೆಯ ಕಾರ್ಯಕಲಾಪಗಳಲ್ಲಿ ಪ್ರಾದೇಶಿಕ ಯುವಜನ ಕೇಂದ್ರಗಳ ಜೊತೆಗೆ, ರಾಜ್ಯದಲ್ಲಿ ಯುವಜನ ಮಾದರಿ ಕಾರ್ಯಕ್ರಮಗಳಿಗಾಗಿ ಕೆಲವು ಆಯ್ಕೆ ಜಿಲ್ಲೆಗಳಲ್ಲಿ ನೆಹರು ಯುವಜನ ಕೇಂದ್ರಗಳ ಸ್ಥಾಪನೆಯೇ ಅತ್ಯಂತ ಮಹತ್ವದ್ದಾಗಿದೆ. ಬೆಂಗಳೂರಿ ನಲ್ಲಿರುವ ರಾಜ್ಯ ಯುವಜನ ಕೇಂದ್ರದ ಕಟ್ಟಡಕ್ಕಾಗಿ 27 ಲಕ್ಷ ರೂಪಾಯಿ ಮಂಜೂರು ಮಾಡಿದೆ.

ಬಿಡು ವೇಳೆಯ ಸದ್ವಿನಿಯೋಗಕ್ಕೆ ಸೂಕ್ತ ಅವಕಾಶ ಕಲ್ಪಿಸುವುದಲ್ಲದೆ, ಸೇವಾ ಮನೋಭಾವ ಮನ್ನೂ ಆದರ್ಶ ದೃಷ್ಟಿಯನ್ನೂ ಯುವಜನರಲ್ಲಿ ಕುದುರಿಸಿಕೊಂಡು ಬರುವುದಕ್ಕಾಗಿ ಈ ವರ್ಷ 250 ಜನ ಪದವೀಧರರು ಮೈಸೂರು ಅಭಿವೃದ್ಧಿ ದಳಕ್ಕೆ ಸೇರಿಕೊಂಡಿದ್ದಾರೆ. ಮುಂದಿನ ವರ್ಷಗಳಲ್ಲಿ ಆಜಗಾರರ ಪ್ರತಿಭೆಯನ್ನು ಊರ್ಜಿತಗೊಳಿಸುವುದಲ್ಲದೆ ದೇಶೀಯ ಕ್ರೀಡೆಗಳಿಗೆ ವಿಶಿಷ್ಟ ಮಹತ್ವ ನೀಡಲಾಗುವುದು.

ಈಗ ನಮ್ಮ ರಾಜ್ಯವು ಕಬ್ಬನ್‌ಪಾರ್ಕ್ ಉದ್ಯಾನದಲ್ಲಿ ಸುಸಜ್ಜಿತವಾಗಿರುವ ಬಾಲ ನಾಟಕ ಮಂದಿರದ ಬಗೆಗೆ ಅಭಿಮಾನ ತಾಳಬಹುದಾಗಿದೆ. ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಪುಟಾಣಿ ಬಾಲ ಭವನಗಳು ಸ್ಥಾಪಿತವಾಗುವ ನಿರೀಕ್ಷೆಯಿದೆ.

ರಾಜ್ಯದ ಆರ್ಥಿಕ ಸ್ಥಿತಿ.

ನಾಲ್ಕನೆಯ ಪಂಚವಾರ್ಷಿಕ ಯೋಜನಾವಧಿಯ ಕೊನೆಯ ವರ್ಷವಾದ 1973-74ರ ಆಯ-ವ್ಯಯ ಅಂದಾಜುಗಳನ್ನು ಈ ಅಧಿವೇಶನದಲ್ಲಿ ನೀವು ಪರಿಶೀಲಿಸುವವರಿದ್ದೀರಿ. ನಾಲ್ಕನೆಯ ಯೋಜನಾವಧಿಯಲ್ಲಿ ನಾನಾ ಕಾರಣಗಳಿಂದಾಗಿ ರಾಜ್ಯದ ಆರ್ಥಿಕ ಸ್ಥಿತಿಯಲ್ಲಿ ತೀವ್ರ ಬಿಕ್ಕಟ್ಟು ಉಂಟಾಗಿತ್ತು. ಹಾಗಿದ್ದರೂ, ಅತ್ಯವಶ್ಯಕಾರ್ಯಕ್ರಮಗಳಿಗೆ —ವಿಶೇಷವಾಗಿ ಕ್ಷಾಮ ಪರಿಹಾರ ಕಾರ್ಯಗಳಿಗೆ—ಭಂಗವಾಗದಂತೆ ನೋಡಿಕೊಳ್ಳುವುದಕ್ಕಾಗಿ, ಭಾರತ ಸರ್ಕಾರದ ಸಹಾಯದಿಂದ ನಮ್ಮ ಸರ್ಕಾರದವರು, ಸಾಧ್ಯವಿದ್ದ ಪ್ರಯತ್ನವನ್ನೆಲ್ಲ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಆರನೆಯ ಆರ್ಥಿಕ ಆಯೋಗವು ಮಾಡಲಿರುವ ಶಿಫಾರಸುಗಳಿಗೆ ಹೆಚ್ಚಿನ ಮಹತ್ವವಿದೆ. ರಾಜ್ಯ ಸರ್ಕಾರದವರು ಆಯೋಗದ ಮುಂದೆ ತಮ್ಮ ಬೇಡಿಕೆಗಳನ್ನು ಮಂಡಿಸಿದ್ದಾರೆ. ನಮ್ಮ ಆರ್ಥಿಕ ಸ್ಥಿತಿಯ ಬಗೆಗೆ ಆಯೋಗವು ವಾಸ್ತವಿಕ ದೃಷ್ಟಿ ತಾಳುವುದೆಂದೂ ಈಗಾಗಲೇ ಬೆಳೆಸಿಕೊಂಡುಬಂದಿರುವ ಸ್ವತ್ತುಗಳ ಹಾಗೂ ಸೇವಾವ್ಯವಸ್ಥೆಗಳ ನಿರ್ವಹಣೆಗೆ ತಗಲುವ ವೆಚ್ಚವನ್ನು ವಹಿಸಿಕೊಳ್ಳುವುದಕ್ಕೆ ಮಾತ್ರವಲ್ಲದೆ, ಅಗತ್ಯವಿರುವ ಹೊಸ ಹೊಸ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳುವುದಕ್ಕೆ ನಮ್ಮ ರಾಜ್ಯಕ್ಕೆ ಸಾಧ್ಯವಾದೀತೆಂದೂ ಆಶಿಸಬಹುದಾಗಿದೆ.

ಶಾಸನ ನಿರ್ಣಯ.

ಹಿಂದಿನ ಅಧಿವೇಶನಗಳಲ್ಲಿ ವಿಧಾನಮಂಡಲದ ಮುಂದೆ ಮಂಡಿಸಿದ ಕೆಲವು ವಿಧೇಯಕಗಳ ಪರಿಶೀಲನೆಗೆ ನಮಯ ಸಾಲದಾಗಿತ್ತು. ಈ ವಿಧೇಯಕಗಳನ್ನೂ ಸರ್ಕಾರದವರು ಅಗತ್ಯವೆಂದು ಭಾವಿಸಬಹುದಾದಂಥ ಬೇರೆ ನಾದರೂ ಹೊಸ ವಿಧೇಯಕಗಳನ್ನು ವಿಧಾನ ಮಂಡಲದ ಮುಂದೆ ಪರಿಶೀಲನೆಗಾಗಿ ಮಂಡಿಸಲಾಗುವುದು. ಅಲ್ಲದೆ, ಮೈಸೂರು (ಮುಂಬೈ ಮತ್ತು ಹೈದರಾಬಾದು ಪ್ರದೇಶಗಳ) ಮತೀಯ ಮತ್ತು ಧರ್ಮಾದಾಯ ಸಂಬಂಧವಾದ ಇನಾಂ ರದ್ದಿ ಯಾತಿ ವಿಧೇಯಕ, 1972 ಮತ್ತು ಸಂಯುಕ್ತ ಪರಿಶೀಲನ ಸಮಿತಿ ಪರಿಶೀಲಿಸಿದ ಮೈಸೂರು ಭೂಸುಧಾರಣಾ (ತಿದ್ದುಪಡಿ) ವಿಧೇಯಕ, 1972—ಇವು ಕೂಡ ವಿಧಾನಮಂಡಲದ ಈ ಅಧಿವೇಶನ ಕಾಲದಲ್ಲಿ ಪರ್ಯಾಲೋಚನೆಗೆ ಬರಲಿವೆ.

ಉಪಸಂಹಾರ.

ನಮ್ಮ ದೇಶವು ಜಾತ್ಯತೀತತೆಗೂ ಸಮಾಜವಾದಕ್ಕೂ ಬದ್ಧವಾಗಿದೆ. ಬಡತನ ಮಾಯವಾಗುವಂತೆ, ಅಸಮತೆಗಳು ಕಡಿಮೆಯಾಗುವಂತೆ, ಅನ್ಯಾಯ ತೊಲಗುವಂತೆ, ಸ್ವಾವಲಂಬನೆಯನ್ನು ಆಧರಿಸಿ ಸೂಕ್ತವಾದ ಆರ್ಥಿಕ-ಸಾಮಾಜಿಕ ಕಾರ್ಯಕ್ರಮಗಳನ್ನು ಜಾರಿಗೆ ತಂದು ಈ ಆದರ್ಶಗಳನ್ನು ಸಾಧಿಸುವ ನಿಮಿತ್ತ ನಿರಂತರವಾಗಿ ದುಡಿಯಲು ಸಂಬಂಧಪಟ್ಟವರೆಲ್ಲರೂ ಯತ್ನಿಸಬೇಕಾಗಿದೆ.

ನಿಮ್ಮ ಕಾರ್ಯಕಲಾಪಗಳು ಯಶಸ್ವಿಯಾಗಿ ನೆರವೇರಲಿ. ಆದರ್ಶಸಾಧನೆಗಾಗಿ ಮತ್ತು ರಾಜ್ಯದ ಜನತೆಯ ನಿರಂತರ ಪ್ರಗತಿ ಹಾಗೂ ಶ್ರೇಯೋಭಿವೃದ್ಧಿಗಾಗಿ ನೀವು ನಡೆಸುವ ಪ್ರಯತ್ನಗಳು ಫಲಪ್ರದವಾಗಲಿ.

"ಜೈ ಹಿಂದ್"